ಇದ್ದರೂ ಇರದಿದ್ದರೂ ಕಾರಣವಿಲ್ಲದೆ ಕೂಗಿ
ಕಾದು ಕಾದು ಸವೆದು ಸವೆದು ಸಾವ ಕರೆದು
ಉತ್ತರವಿಲ್ಲದೆ ತಲೆ ಕೆರೆಯಿತು ಸಿಕಾಡ

ಕಾರಣವಿಲ್ಲದೆ ಬಾಳುವವೆ ಹಾಗಾದರೆ
ಕಾರಣ ಬೇಡವೇ ಬದುಕಬೇಕಾದರೆ
ಸಾವ ಕಾರಣವೇ ಬದುಕೆ ಹಾಗಾದರೆ?
ಮತ್ತೆ ಕವಿಗಳು ಏನೇನೋ ಹುಡುಕಿದರಲ್ಲಾ
ಹುಡುಕಿ ಹುಡುಕಿ ಬದುಕಿಸಿಕೊಂಡರಲ್ಲಾ...

ಒಂದರೊಳಗೊಂದು ಕಣ್ಣ ನೆಟ್ಟವು ಆಸೆ ಕಂಡವು
ಇವರ ಅಕ್ಷರ ಪದದಲ್ಲಿ ಎಂಥದೋ ಹೊಳಪಿದೆಯಲ್ಲ
ಇವರ ಕನಸು ಕಲ್ಪನೆಯಲ್ಲಿ ಏನೋ ಮಾಯೆಯಿದೆಯಲ್ಲ
ಯಾಕೆ ಬಾಳಬಾರದು ನಾವೂ ಇವರ ಜೊತೆ?
ಇರುವ ಆಸೆಗೆ ಕವಿತೆಯೂ ಕಾರಣ ನೆಪವಾಗಿ
ಕವಿತೆಯತ್ತ ನೋಡಿರಲು

ಯಾಕೋ ಕವಿತೆ ಕಣ್ಣುಮುಚ್ಚಿ ಸ್ತಬ್ಧವಾಗಿದೆ
ಕವಿತೆಯೇ ನಿಂತ ಹೊತ್ತಿನಲ್ಲಿ
ಕಾದು ಕಾದು ಸಾಕಾಗಿ ದಿಗಿಲಾಗಿ ಅವೂ ಸ್ತಬ್ಧವಾಗಿ
ಅಳೆಯಲು ಏನೂ ಇಲ್ಲವಾಗಿ
ಹೇಳಲು ಏನೂ ಉಳಿದಿಲ್ಲದಂತಾಗಿ
ಅದರ ಮೇಲೇರಿ ಸಾಲೇರಿ ಸರುಗಿದಂತೆ

ಕವಿತೆಯೂ ಈಗ ತೆವಳುತ್ತಿರಲು